ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 6, January-February 2026, Pp. 14-17
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ವಚನಗಳಲ್ಲಿ ವೃತ್ತಿರೂಪಕಗಳು

**ಕುಸುಮ ಬಿ. ಎಂ**

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಕಲಾ ಕಾಲೇಜು, ಬೆಂಗಳೂರು

**Abstract:**

*ಚಂಪೂ ಸಾಹಿತ್ಯ ತನ್ನೆಲ್ಲ ಸಾಧ್ಯತೆಗಳನ್ನು ಪ್ರಕಟಪಡಿಸಿ ಕಳಾಹೀನವಾಗಿದ್ದಾಗ, ವಚನ ಸಾಹಿತ್ಯವು ಜನಸಮ್ಮುಖವಾಗಿ ಮರುಹುಟ್ಟು ಪಡೆಯಿತು. ಶೈವ ಧರ್ಮವನ್ನು ಪರಿಷ್ಕರಿಸಿ, ಅದಕ್ಕೊಂದು ಹೊಸ ರೂಪ ಕೊಡುವ ಪ್ರಯತ್ನವೂ ನಡೆಯಿತು. ಜಾತಿ ಆಧಾರಿತ ಸಮಾಜವನ್ನು ಪಲ್ಲಟಿಸುವ ಈ ಕ್ರಾಂತಿಯು ಧರ್ಮವನ್ನು ಕಾಯಕದ ನೆಲೆಯಲ್ಲಿ ಗ್ರಹಿಸಿತು. "ಕಾಯಕವೇ ಕೈಲಾಸ"ವೆಂಬ ಅವರ ವಿಚಾರ ಕಾಯಕ ಗೌರವವನ್ನು ಎತ್ತಿ ಹಿಡಿಯಿತು. ಬುದ್ಧಿ ಆಧಾರಿತ ವೃತ್ತಿ ಮತ್ತು ಶ್ರಮಾಧರಿತ ತಾರತಮ್ಯ ಹೋಗಲಾಡಿಸಿತು. ವೃತ್ತಿಗಳಲ್ಲಿ ಯಾವುದು ಮೇಲಲ್ಲ, ಯಾವುದು ಕೀಳಲ್ಲ ಎಂಬ ಸಂದೇಶದೊಂದಿಗೆ ವೃತ್ತಿಯ ಬಗೆಗಿನ ಕೀಳರಿಮೆಗಳನ್ನು ದೂರ ಮಾಡಿತು. ಇದರಿಂದಾಗಿ ಅಂದಿನ ಬಹುಜನ ತಮ್ಮ ವೃತ್ತಿ ಬದುಕಿನ ಜೊತೆಗೆ ಅಧ್ಯಾತ್ಮ ಜೀವನವನ್ನು ಪ್ರವೇಶಿಸುವಂತಾಯಿತು. 'ಕಾಯಕ' ಶರಣನ ಲಕ್ಷಣ ಮತ್ತು ಶ್ರದ್ಧೆಯ ಕೇಂದ್ರವಾಯಿತು.*

**Keywords:** *ಕನ್ನಡ ಸಾಹಿತ್ಯ, ವಚನ ಸಾಹಿತ್ಯ, ವೃತ್ತಿರೂಪಕಗಳು*

## ಪೀಠಿಕೆ

ಅನಕ್ಷರಸ್ಥರಾದ ಶರಣರ ಸೃಜನಶೀಲತೆ ಯಾರಿಗೂ ಕಡಿಮೆಯಾದದ್ದಲ್ಲ. ತಮ್ಮ ಅನುಭಾವಿಕ ಸ್ಥಿತಿಯನ್ನು ವಿವರಿಸುವಾಗ ಅಥವಾ ಸಮಾಜಕ್ಕೆ ಅದರ ತಪ್ಪಿನ ಅರಿವಾಗಿಸುವಾಗ ಅವರ ಕಾವ್ಯ ಪ್ರಯೋಗ ವಿಶೇಷವಾಗಿರುತ್ತದೆ. ಅವರ ವೃತ್ತಿ ಬದುಕಿನ ಪದಗಳನ್ನೇ ಇಲ್ಲಿ ರೂಪಕಗಳಾಗಿ ಬಳಸುತ್ತಾರೆ. ಇದು ಅವರ ಸೃಜನಶೀಲತೆಯನ್ನು ನಿರೂಪಿಸುತ್ತದೆ.

ಪ್ರಾತಿನಿಧಿಕವಾಗಿ ಕೆಲವು ವಚನಕಾರರ ವಚನಗಳನ್ನು ಇಲ್ಲಿ ಅಭ್ಯಸಿಸಬಹುದು.

***ಕಾಯಕ ನಿಂದಿತ್ತು ಹೋಗಯ್ಯ ಎನ್ನಾಳ್ದನೆ***
***ಭಾವಶುದ್ಧವಾಗಿ ಮಹಾಶರಣರ ತಿಪ್ಪೆಯ ತಪ್ಪಲ ಅಕ್ಕಿಯ ತಂದು***
***ನಿಶ್ಚೈಸಿ ಮಾಡಬೇಕು ಮಾರಯ್ಯಪ್ರಿಯ ಅಮರೇಶ್ವರ ಲಿಂಗಕ್ಕೆ,***
***ಬೇಗ ಹೋಗು ಮಾರಯ್ಯ***

ಆಯ್ದಕ್ಕಿ ಲಕ್ಕಮ್ಮನ ಈ ವಚನವು ಶರಣರ ಬದುಕಿನಲ್ಲಿ ಕಾಯಕದ ಪಾತ್ರ ಮತ್ತು ಮಹತ್ವವನ್ನು ತಿಳಿಸುತ್ತದೆ. ಕಾಯಕ ನಿಷ್ಠೆಯಲ್ಲಿ ಶರಣ ತಲ್ಲೀನನಾಗಿರಬೇಕೆಂದು ಬಯಸುತ್ತದೆ ಅದು ಯಾವುದೇ ಕಾಯಕವಾದರೂ ಸಮಯವಿಳಂಬವಿಲ್ಲದೆ ಶುದ್ಧ ಮನಸ್ಸಿನಿಂದ ಮಾಡಬೇಕು ಎಂಬುದನ್ನು ಇಲ್ಲಿ ಸರಳ ಮಾತುಗಳಲ್ಲಿ ಕಟ್ಟಿಕೊಡಲಾಗಿದೆ.

***Please cite this article as:*** ಕುಸುಮ, ಬಿ.ಎಂ.(2026). ವಚನಗಳಲ್ಲಿ ವೃತ್ತಿರೂಪಕಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 4(6), 14–17

***ಮಾಡುವ ಮಾಟವುಳ್ಳನ್ನಕ್ಕ ಬೇರೊಂದು ಪದವನರಸಲೇತಕ್ಕೆ?***

***ದಾಸೋಹವೆಂಬ ಸೇವೆಯ ಬಿಟ್ಟು ನೀಸಲಾರದೆ***

***ಕೈಲಾಸವೆಂಬ ಆಸೆ ಬೇಡ***

***ಮಾರಯ್ಯಪ್ರಿಯ ಅಮರೇಶ್ವರ ಲಿಂಗವಿದ್ದ ಠಾವೆ ಕೈಲಾಸ.***

ಕೈಲಾಸವೇ ತಾವು ಮಾಡುವ ಕಾಯಕದಲ್ಲಿ ಅಡಗಿದೆ ಎಂಬ ಅಚಲವಾದ ನಂಬಿಕೆ ಮತ್ತು ಕಾಯಕದ ಮೇಲಿನ ಅಭಿಮಾನ ವೃತ್ತಿ ಬಳಕೆಯ ಪದಗಳ ಬಗೆಗೂ ಅಭಿಮಾನವನ್ನು ಮೂಡಿಸಿರುವುದನ್ನು ಶರಣರ ವಚನಗಳೇ ಹೇಳುತ್ತವೆ. ಇಂದಿನ 'Job Satisfaction' ನ ಒಂದು ಲಕ್ಷಣವೂ ಇಲ್ಲಿ ಕಾಣುತ್ತದೆ. ಮಹಾಶರಣರ ತಿಪ್ಪೆಯ ತಪ್ಪಲ ಅಕ್ಕಿಯ ತಂದು ದಾಸೋಹ ಮಾಡುವ ದಂಪತಿಗಳ ಕಾಯಕತೃಪ್ತಿ ಹೇಗಿದೆಯೆಂದರೆ ಅವರು ಮತ್ತೊಂದು ಪದವಿಯನ್ನು ಹುಡುಕಲು ಬಯಸುವುದಿಲ್ಲ. ಅಲ್ಲದೆ ಅದರಲ್ಲೇ ಕೈಲಾಸ ಕಾಣುವೆವು ಎಂಬ ಆತ್ಮವಿಶ್ವಾಸ ಅವರಿಗಿದೆ.

***ಆವ ಮಡಕೆಯಾಗಲಿ, ಸ್ವಾದ ಸಾಕಾರದಲ್ಲಿ ಭೇದವಿಲ್ಲ***

***ಮಣ್ಣ ಮಡಕೆ ಒಕ್ಕಲಿಗನಲ್ಲಿ***

***ಚಿನ್ನದ ಮಡಕೆ ಅರಮನೆಯಲ್ಲಿ***

***ಅರಮನೆ ಗುರುಮನೆ ಹಿರಿದಾದ ಕಾರಣ***

***ಹಾದರ ಸಲ್ಲದು ಕಾಣ ತ್ರಿಪುರಂತಕಲಿಂಗವೇ***

ವೃತ್ತಿಯಿಂದ ಅಕ್ಕಸಾಲಿಗನಾಗಿದ್ದ ಕಿನ್ನರಿ ಬ್ರಹ್ಮಯ್ಯನು, ಬಡತನ ಸಿರಿತನಗಳ ಪ್ರತಿಮೆಗಳಾಗಿ ಮಣ್ಣ ಮಡಕೆ ಮತ್ತು ಚಿನ್ನದ ಮಡಕೆಯನ್ನು ಬಳಸುತ್ತಾನೆ. ಯಾವ ಮಡಕೆಯಲ್ಲಿ ಅಡುಗೆಯನ್ನು (ಅನ್ನವನ್ನು) ಮಾಡಿದರೂ ಅದರ ಸ್ವಾದದಲ್ಲಿ ಭೇದವಿಲ್ಲ ಎನ್ನುವ ಅವನು ತನ್ನ ವೃತ್ತಿಯ ಪದಗಳ ಮೂಲಕವೇ ಸಮಾಜದ ಬಡತನ ಸಿರಿತನ ಎಂಬ ಭೇದದ ನೋಟಕ್ರಮವನ್ನು ತಿದ್ದುವ ಕಾರ್ಯ ಮಾಡುತ್ತಾನೆ. ಅರಮನೆಯೇ ಆದ ಗುರುಮನೆ ಹಿರಿದಾದ ಕಾರಣ ಇಲ್ಲಿ ವಂಚನೆ ಸಲ್ಲುವುದಿಲ್ಲ ಎನ್ನುತ್ತಾನೆ.

***ಇಂದು ಬಂದ ಬಹುರೂಪವ ನೋಡಿರಯ್ಯ***

***ಗತಿಯ ಹೊದ್ದದೆ, ಮತಿಯ ಹೊದ್ದದೆ, ಸ್ಥಿತಿಯ ಹೊದ್ದದೆ, ಸ್ಥಾನವ ಹೊದ್ದದೆ,***

***ಐವರು ಕಟ್ಟಿದ ಕಟ್ಟಳೆಯ ಮೀರಿ ನಾನಾಡುವ ಬಹುರೂಪವ***

***ರೇಕಣ್ಣಪ್ರಿಯ ನಾಗಿನಾಥ ಬಸವಣ್ಣನಿಂದ ಬದುಕಿದೆ.***

ಮನುಷ್ಯನ ಪ್ರತಿದಿನವೂ ಆಡುವ ನಾಟಕ, ನಿತ್ಯವೂ ಹಾಕುವ ವೇಷವನ್ನು ಕುರಿತು ವೃತ್ತಿಯ ಪರಿಭಾಷೆಯಲ್ಲಿಯೇ ವಿವರಿಸುವ ಬಹುರೂಪಿ ಚೌಡಯ್ಯ ವಚನಗಳನ್ನು ಕಾಣಬಹುದು. ಸಿರಿ (ಸುಖ) ಬಂದಾಗ ಉಬ್ಬುವ, ಬಡತನ (ದುಃಖ) ಬಂದಾಗ ಕುಗ್ಗುವ ಮನುಷ್ಯನ ವರ್ತನೆಯೇ. ಅವನಾಡುವ ಬಹುರೂಪ ಪಂಚೇಂದ್ರಿಯಗಳ ಕಟ್ಟಳೆ ಮೀರಿರುವ ಬಹುರೂಪವೆಂದು, ತಾನು ಶರಣನಾದ – ಬಸವಣ್ಣನಿಂದ ಲಿಂಗ ಕಟ್ಟಿಸಿಕೊಂಡ ಸ್ಥಿತಿಯ ಬಹುರೂಪವನ್ನು ಸೋಜಿಗದಿಂದ ಒಪ್ಪಿಕೊಳ್ಳುವಾಗಲೂ ತನ್ನ ಭಾಷೆಯ ಬಳಕೆಯೇ. ವೃತ್ತಿಯೇ ತಾವಾದ ಬದುಕು. ವೃತ್ತಿ ಬಿಟ್ಟು ಬೇರೆ ಅಸ್ಮಿತೆ ಇಲ್ಲದ ಭಾವವನ್ನು ಕಾಣಬಹುದು.

***ಅಲ್ಲಿಯ ಬಹುರೂಪ ಇಲ್ಲಿಗೆ ಬಂದಿತ್ತು***

***ಇಲ್ಲಿಯ ಬಹುರೂಪ ಎಲ್ಲಿ ಅಡಗಿತ್ತೋ?***

***ಎನ್ನ ಬಹುರೂಪ ಬಲ್ಲವರಾರೋ?***

***ನಾದ ಹರಿದು ಸ್ವರವು ಸೂಸಿದ ಬಳಿಕ***

***ಈ ಬಹುರೂಪ ಬಲ್ಲವರಾರೋ***

***ರೇಕಣ್ಣಪ್ರಿಯ ನಾಗಿನಾಥ ಬಸವಣ್ಣನಿಂದ ಬದುಕಿತೀ ಲೋಕವೆಲ್ಲ.***

ಲೋಕದ ಬದುಕಿನ ಕ್ಷಣಿಕತೆಯನ್ನು ಕುರಿತು ಹೇಳುವ ಬಹುರೂಪಿ ಚೌಡಯ್ಯನ ವಚನವಿದು.

***ತೊಗಲ ಸೀರೆಯ ತೆರೆಯ ಹಿಡಿದು***

***ಬಲು ಎಲುವಿನ ಗಳುವಿನಲ್ಲಿ***

***ನರವಿನ ಭೀಮಗಟ್ಟೆ ಕಟ್ಟಿ***

***ತೆರೆ ನಿಂದಿತ್ತು ಜವನಿಕೆಯ ಮರೆಯಲ್ಲಿ***

***ಬಂದು ನಿಂದು ಜಜ್ಜರೆ ಪುರೆ(ಹರೆ)ಯಾಯಿತ್ತು***

***ಹೋಯಿತ್ತು ಎಂಬ ಬಹುರೂಪ ಮುಂತೊಟ್ಟು***

***ರೇಕಣ್ಣಪ್ರಿಯ ನಾಗಿನಾಥ***

***ಭಲರೆ ಧರುರೆ ಎನುತಿರ್ದೆನು.***

ಮಾನವ ಜನ್ಮವೇ ಹೇಗೆ ಒಂದು ಬಹುರೂಪ. ಇದನ್ನು ಸೂತ್ರ ಹಿಡಿದು ಆಡಿಸುತ್ತಿರುವವನು ಆ ದೇವ ಎಂಬುದನ್ನು ತೊಗಲ ಸೀರೆ, ತೆರೆ, ಎಲುವಿನ ಗಳು, ನರವಿನ ಭೀಮಗಟ್ಟೆ, ಜವನಿಕೆ ಎಂಬ ಪಾರಿಭಾಷಿಕ ಪದಗಳ ಮೂಲಕ ನಿರೂಪಿಸಿದ್ದಾನೆ.

***ಕೋ ಬಾ ಎಂದಲ್ಲಿ ಆತ್ಮನ ಭೇದ***

***ಅಂಬಾ ಎಂದಲ್ಲಿ ಅರಿವಿನ ಭೇದ***

***ಧಾ ಎಂದು ನಕ್ಕಿರಿದಲ್ಲಿ ಚಿದಾತ್ಮನ ಭೇದ***

***ಇಂತೀ ಗುಣದ ಪಶು ಅಸುವಿನ ಬಲೆಯ ಕಾಯ್ದೊಪ್ಪಿಸಬೇಕು***

***ಗೋಪತಿನಾಥ ವಿಶ್ವೇಶ್ವರಲಿಂಗಕ್ಕೆ***

ಹೇಗೆ ಪಶುವಿನ ಪ್ರತಿ ಕೂಗೂ ಬೇರೆ ಬೇರೆ ಅಗತ್ಯಗಳನ್ನು ಸೂಚಿಸುತ್ತದೆಯೋ ಹಾಗೆಯೇ ಭಕ್ತನ ಸಾಧನೆಯ ನಿಲುವುಗಳು ಭಿನ್ನವಾಗಿರುತ್ತವೆ, ಇವನ್ನು ಮನಗಂಡು ಪೂರೈಸಬೇಕೆಂಬುದನ್ನು ತನ್ನ ವೃತ್ತಿ ಪರಿಭಾಷೆಯಲ್ಲಿ ನಿರೂಪಿಸಿದ್ದಾನೆ ತುರುಗಾಹಿ ರಾಮಣ್ಣ. 12ನೇ ಶತಮಾನದ ಒಬ್ಬ ತುರುಗಾಹಿಯ ಈ ವಚನ ರಚನಾವಿಧಾನ ಮತ್ತು ತಿಳುವಳಿಕೆ ಆಧುನಿಕ ಕಾಲದ ವಿದ್ವಾಂಸ ಮ್ಯಾಸ್ಲೊನ ಸಿದ್ಧಾಂತವನ್ನು ಪ್ರತಿಫಲಿಸುತ್ತದೆ. ಷಟ್ಥಲಗಳ (ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ) ನಿರೂಪಣೆಯ ತನ್ನದೇ ಭಾಷೆ ಮತ್ತು ವ್ಯಾಖ್ಯಾನವನ್ನು ಈ ವಚನದಲ್ಲಿ ಕಾಣಬುಹುದು.

***ಶ್ವೇತ ಪೀತ ಕಪೋತ ಕೃಷ್ಣ ಗೌರ ಮಾಂಜಿಷ್ಟ***

***ಕಪಿಲ ಅರ್ಬುರ ಅಳಗು ಬೊಟ್ಟಳಗ***

***ಇಂತೀ ದಶವರ್ಣದ ಪಶುನಾಮದ ಅಸುವನರಿತು***

***ಸಂಜ್ಞೆ ಗರ್ಜನೆ ತಾಡನೆ ತ್ರಿವಿಧ ಭೇದಂಗಳಿಂದ***

***ಇದೊಪ್ಪಿಸಬೇಕು ಗೋಪತಿನಾಥ ವಿಶ್ವೇಶ್ವರಲಿಂಗಕ್ಕೆ***

ತನ್ನ ತುರುಗಳ ಗುಣವರ್ಣ ಜ್ಞಾನವನ್ನು ಮನುಷ್ಯನಲ್ಲಿರುವ ಅರಿಷಡ್ವರ್ಗಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳಿಗೆ ಹೋಲಿಕೆ ಮಾಡಿ ಪಶುಗಳ ದುರ್ವರ್ತನೆಯನ್ನು ಹೇಗೆ ಸಂಜ್ಞೆ, ಗರ್ಜನೆ, ತಾಡನೆ, ತ್ರಿವಿಧ ಭೇದಗಳಿಂದ ನಿವಾರಿಸಲಾಗುತ್ತದೆಯೋ ಹಾಗೆಯೇ ಇವನ್ನು ಹತೋಟಿಗೆ ತಂದು ತನ್ನ ಇಷ್ಟಲಿಂಗಕ್ಕೆ ಒಪ್ಪಿಸಬೇಕು ಎನ್ನುವಾಗ ತನ್ನ ವೃತ್ತಿ ಪದಗಳನ್ನು ಧಾರಳವಾಗಿ ಬಳಸುತ್ತಾನೆ. ಹಾಗೆ ಬಳಸಲು ವಚನಕಾರನಿಗೆ ಯಾವುದೇ ಅಂಜಿಕೆ ಇಲ್ಲ. ಇದರ ಜೊತೆಗೆ ತನ್ನ ಅಭಿವ್ಯಕ್ತಿಯ ಬಗೆಗೆ ಮತ್ತು ಅದರ ಸಾಧ್ಯತೆಯ ಬಗೆಗೆ ಆತ್ಮವಿಶ್ವಾಸವಿದೆ.

ದಿನಬಳಕೆಯ ಲೋಕೋಪಯೋಗಿ ಭಾಷೆಯನ್ನು ಭಾವಪಯೋಗಿಯನ್ನಾಗಿಸುವ ನೆಲೆ ಸಾಮಾನ್ಯರಾಗಿದ್ದ ವಚನಕಾರರಿಗೆ ಹೇಗೆ ಸಿದ್ಧಿಸಿತು! ವಚನ ಚಳುವಳಿ ಕಾಯಕ ಗೌರವದ ನಿಲುವಿನ ಮೂಲಕ ಶರಣರಲ್ಲಿ ಮೂಡಿಸಿದ ಆತ್ಮಭಿಮಾನ ಮತ್ತು ಅಭಿವ್ಯಕ್ತಿಯ ಸ್ವಾತಂತ್ರ್ಯವನ್ನು ಇಲ್ಲಿ ಕಾಣಬಹುದು.

ಉಪಯೋಗದ ಭಾಷೆಯ ಹಲವು ಸ್ವರೂಪಗಳು ಪರಿಭಾಷೆಯ ಬಳಕೆಯಲ್ಲಿ ತೋರಿ ಬರುತ್ತದೆ. ವೃತ್ತಿ ಸಂಬಂಧಿತವಾದ ಪದಗಳನ್ನು ಆಧ್ಯಾತ್ಮಿಕ ಅಥವಾ ಸ್ವ ಅನುಭವ ವೇದ್ಯವಾದದ್ದು ಅಥವಾ ಸಾಮಾಜಿಕ ತಿಳುವಳಿಕೆಯನ್ನು ನೀಡಲು ಸಾಧ್ಯವಾಗುವ ಪರಿಭಾಷೆಯಾಗಿ ಬಳಸಿಕೊಂಡ ಅವರ ಕ್ರಮ ಭಿನ್ನವಾದುದು. ತ್ರಿವಿಧ ದಾಸೋಹ ಈ ರೀತಿಯ ಅನುಭಾವಿಕ ಪದಗಳು ಕೂಡ ಅವರ ವೃತ್ತಿ ಪರಿಭಾಷೆಗೆ ನಿಲುಕಿದ್ದು ಸ್ವಾರಸ್ಯಕರ. ಅವರ ಈ

ಸೃಜನಶೀಲತೆಯು ಕನ್ನಡ ವೃತ್ತಿ ಪದಕೋಶ ರಚನೆಗೆ ನೆರವಾಗುವುದರ ಜೊತೆಗೆ ವಚನಕಾರರಿಗೆ ತಮ್ಮ ಅಭಿವ್ಯಕ್ತಿಯ ಸಮಯದಲ್ಲಿ ಕಾಡಬಹುದಾದ ಪರಿಭಾಷಿಕ ಪದಗಳ ಕೊರತೆಯನ್ನು ನೀಗಿಸಿದೆ.

**ಪರಾಮರ್ಶನ ಗ್ರಂಥಗಳು**


- ಕಲಬುರ್ಗಿ, ಎಂ. ಎಂ. (1993). ಸಮಗ್ರ ವಚನ ಸಂಪುಟಗಳು. ಕನ್ನಡ ಪುಸ್ತಕ ಪ್ರಾಧಿಕಾರ